Sri. D.K. Shivakumar :- Yes,

ಶ್ರೀ ಎಸ್. ಸುರೇಶ್‌ಕುಮಾರ್ : ಅಂದರೆ ಇಲ್ಲಿ ಏನಿದೆಯೋ ಅದನ್ನು ಬೆಂಗಳೂರಿಗೂ ಕೂಡ ಅಡಾಪ್ಟ್ ಮಾಡುತ್ತೇವೆ ಎಂದರ್ಥ ಓ.ಕೆ. ಬೆಂಗಳೂರಿನಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಂನ್ನು ಇಂಟ್ರಡ್ಯೂಸ್ ಮಾಡಿದಾಗ ಕೊಟ್ಟ ಮೊದಲನೆಯ ಭರವಸೆ ಏನೆಂದರೆ ಇನ್ನು ಮುಂದೆ ಇದರಿಂದ ಜನಕ್ಕೆ ಏನೂ ತೊಂದರೆಯಾಗುವುದಿಲ್ಲ. ಅವರವರ ಆಸ್ತಿಯ ಅಸೆಸ್‌ಮೆಂಟ್‌ನ್ನು ಅವರವರೇ ಮಾಡುತ್ತಾರೆ. ಇನ್ನು ಎರಡನೆಯದಾಗಿ ಒಂದು ಸಲ ನಾವು ಅಸೆಸ್‌ಮೆಂಟ್ ರಿಟರ್ನ್ಸ್ ಫೈಲ್ ಮಾಡಿದ ಮೇಲೆ ಐದು ವರ್ಷದವರೆಗೂ ಯಾವ ರೀತಿಯ ರಿವಿಶನ್ ಇರುವುದಿಲ್ಲ ಎನ್ನುವ ಭರವಸೆಯನ್ನು ಕೊಟ್ಟಿರಿ. ಆ ಭರವಸೆಯ ಮೇರೆಗೆ ಜನರು ಎಲ್ಲರೂ ಕೂಡ ಒಪ್ಪಿಕೊಂಡು ಜನರೆಲ್ಲರೂ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಂಗೆ ಒಪ್ಪಿಕೊಂಡು ಇಂದು ಬೆಂಗಳೂರಿನಲ್ಲಿರುವ ಎಲ್ಲರೂ ಕೂಡ ಒಪ್ಪಿಕೊಂಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಈಗಾಗಲೇ ನಾಲ್ಕು ವರ್ಷಗಳು ಆಗಿಹೋಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಇರಲಿ, ಇರಲಿ, ಹೀಗಿರುವಾಗ ನೀವು ನಾಲ್ಕು ವರ್ಷವಾಗಿದೆ ಎಂದು ಹೇಳಿಬಿಟ್ಟು ಬೀಳುವವರೆಲ್ಲಾ ಬಿದ್ದರು ಬಲಿಗೆ, ಇನ್ನು ಮಾಡುತ್ತೇವೆ ನಾವು ಎಂದು ತೋರಿಸಿದರೆ ಇದು ಯಾವುದೇ ರಾಜ್ಯಭಾರ ಮಾಡುವ ಆಡಳಿತದ ಲಕ್ಷಣವಲ್ಲ. ನೀವೇನು ಐದು ವರ್ಷ ಎಂದು ಮಾಡಿದ್ದಿರಿ, ಆ ಐದು ವರ್ಷವನ್ನು ಇಡೀ ರಾಜ್ಯಕ್ಕೆ ತೆಗೆದುಕೊಂಡು ಬನ್ನಿ. ಇದರಿಂದ ನಿಮಗೇನೂ ತೊಂದರೆಯಾಗುವುದಿಲ್ಲ. ಪ್ರತಿವರ್ಷ ಟ್ಯಾಕ್ಸ್ ಅಂತೂ ಕಟ್ಟುತ್ತಾರೆ. ನಿಮಗೇನಾದರೂ ಡೌಟ್ ಇದ್ದರೆ, ಈಗ ನಾನು ಕಾರ್ಪೊರೇಷನ್ ಅಧಿಕಾರಿ ಶಿವಕುಮಾರ ಅವರು ಗೊತ್ತಿಲ್ಲದೆ ಸೆಕೆಂಡ್ ಫ್ಲೋರ್ ಕಟ್ಟಿದ್ದಾರೆಂದು ನನಗೆ ಗೊತ್ತಾದ ತಕ್ಷಣ at any time I can go to Shivakumar's house. provided he allows me. ಅಲ್ಲಿ ಹೋಗಿಬಿಟ್ಟು ಅದಿದ್ದರೆ ಜೇಂಜ್ ಮಾಡಿದ್ದಾರೆ ಎಂದು ಫೈನ್ ಹಾಕುತ್ತೀರೋ ಪನಿಶ್‌ಮೆಂಟ್ ಕೊಡುತ್ತಿರೋ, ಕೊಟ್ಟು ಮಾಡಬಹುದು. ಅದು ಬಿಟ್ಟು ಎಲ್ಲರೂ ಇಡೀ ಬೆಂಗಳೂರಿನಲ್ಲಿ ಸುಮಾರಿಯು 30-35 ಲಕ್ಷ ಜನರನ್ನು ಈ ರೀತಿ ಒಂದು ಚುನಾವಣಾ ಭರವಸೆ ತರಹ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಭರವಸೆ ಕೊಟ್ಟು ಎಲ್ಲರನ್ನೂ ಕೂಡ ಕರೆದುಕೊಂಡು ಈ ಸ್ಕೀಮ್ ಮಾಡಿ, ಈಗ ಇನ್ನು ಒಂದು ವರ್ಷಕ್ಕೆ ಮಾಡುತ್ತೇವೆ ಎನ್ನುವುದನ್ನು ಯಾರೂ ಕೂಡ ಒಪ್ಪುವುದಿಲ್ಲ. ಅದು ನ್ಯಾಯಸಮ್ಮತವಲ್ಲ. ದಯವಿಟ್ಟು ಮೊದಲು ಏನು ಭರವಸೆ ಕೊಟ್ಟಿದ್ದೀರಿ, ಅದನ್ನು ಇವತ್ತು ಇಡೀ ರಾಜ್ಯಕ್ಕೆ ಕೊಡಿ ಎಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ 2003ನೇ ಸಾಲಿನ.....

ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಕರಾಳವಾಗುತ್ತದೆ. ಇದನ್ನು ನಾವು ವಿರೋಧ ಮಾಡುತ್ತೇವೆ. ದಯವಿಟ್ಟು ಇದನ್ನು ಪಾಸ್ ಮಾಡಬಾರದು. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಡಬೇಕು ಎನ್ನುವುದನ್ನು ಒತ್ತಾಯ ಮಾಡುತ್ತೇವೆ. ಇದನ್ನು ವಿತ್‌ಡ್ರಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಇದು ಪಾಸ್ ಆಗುವಂತಹ ಸಂದರ್ಭದಲ್ಲಿ ನಾವು ಪ್ರತಿಭಟನೆ ಮಾಡಿ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿಯ ಸದಸ್ಯರುಗಳು ಬಾವಿಗೆ ಬಂದಿಳಿದರು)